# ವ್ಯಾಪಾರೀಕರಣವಾಗುತ್ತಿರುವ ವೈದ್ಯಕೀಯ ಸೇವೆ

## ದೇವರಾಜ ಅರಸು ನರ್ಸಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ ನರ್ಸಿಂಗ್ ಸೇವೆಗಳ ನಿರ್ದೇಶಕಿ ಡಾ.ಕೆ.ಲಲಿತಾ

• **ಕನ್ನಡಪ್ರಭ ವಾರ್ತೆ** ಕೋಲಾರ

ವೈದ್ಯಕೀಯ ಸೇವೆಯಲ್ಲಿ ವ್ಯಾಪಾರ ಸಲ್ಲದು, ಇಲ್ಲಿ ಜನರ ಪ್ರಾಣ ರಕ್ಷಣೆಯೇ ಕರ್ತವ್ಯವಾಗಬೇಕು. ಆದರೆ ಹಣದ ಲಾಭಕ್ಕಾಗಿ ಸೇವೆ ಸಲ್ಲಿಸುವವರ ಸಂಖ್ಯೆ ಹೆಚ್ಚಾಗುತ್ತಿರುವುದು ವಿಷಾದಕರ ಸಂಗತಿ ಎಂದು ನರ್ಸಿಂಗ್ ಸೇವೆಗಳ ನಿರ್ದೇಶಕಿ ಡಾ.ಕೆ. ಲಲಿತಾ ಆತಂಕ ವ್ಯಕ್ತಪಡಿಸಿದರು.

ನಗರದ ದೇವರಾಜ ಅರಸು ನರ್ಸಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಶುಶ್ರೂಷಕಿಯರಲ್ಲಿ ಸೇವಾ ಮನೋಭಾವ ಇರಬೇಕು ಹಣದ ದೃಷ್ಟಿಯಲ್ಲದೆ, ರೋಗಿಗಳಿಗೆ ಗುಣಮಟ್ಟದ ಸೇವೆ ಕಲ್ಪಿಸಿದಾಗ ಸಮಾಜದಲ್ಲಿ ಗೌರವ ಸಿಗುತ್ತದೆ ಎಂದು ತಿಳಿಸಿದರು.

**ಬದ್ಧತೆ, ಪ್ರಾಮಾಣಿಕತೆ ಮುಖ್ಯ:** ರೋಗಿಗಳ ಸೇವೆಯಲ್ಲಿ ಸ್ವಚ್ಛತೆ, ಶಿಸ್ತು, ಬದ್ಧತೆ ಮತ್ತು ಪ್ರಾಮಾಣಿಕತೆ ಇರಬೇಕು. ಸೇವೆಯು ರೋಗಿಗಳಲ್ಲಿ ಭವಿಷ್ಯದ ಆಶಾಭಾವನೆ ಮೂಡಿಸುವಂತಾಗಬೇಕು. ಈ ನಿಟ್ಟಿನಲ್ಲಿ ವೈದ್ಯರ ಚಿಕಿತ್ಸೆಗಿಂತ ಶುಶ್ರೂಷಕಿಯರ ಸೇವೆ ಪ್ರಮುಖ ಪಾತ್ರ ವಹಿಸುತ್ತದೆ. ಕರ್ತವ್ಯದಲ್ಲಿ ಗುರುಗಳ ಮಾರ್ಗದರ್ಶನ ಅಳವಡಿಸಿಕೊಂಡರೆ ಗುರಿ ತಲುಪಲು ಸಾಧ್ಯ ಎಂದು ಹೇಳಿದರು.

ರೋಗಿಗಳು ಆಸ್ಪತ್ರೆಗೆ ಬಂದ ತಕ್ಷಣ ಮೊದಲು ಶುಶ್ರೂಷಕಿಯರನ್ನು ಭೇಟಿಯಾಗುತ್ತಾರೆ. ಸ್ನೇಹದಿಂದ ಮಾತನಾಡಿಸುವುದರಿಂದಲೇ ಕಾಯಿಲೆ ಶೇ. 50ರಷ್ಟು ವಾಸಿಯಾಗುತ್ತದೆ. ವೃತ್ತಿ ಜೀವನದಲ್ಲಿ ಸನ್ನಡತೆಯಿಂದ ಕಾರ್ಯ ನಿರ್ವಹಿಸಿದರೆ ವಿಶ್ವಾಸ ಗಳಿಸಲು ಸಾಧ್ಯ. ಪದವಿಯ ಜತೆಗೆ ವಿದ್ಯಾರ್ಥಿಗಳು ವೃತ್ತಿ ಕೌಶಲ ತರಬೇತಿ ಪಡೆದುಕೊಳ್ಳಬೇಕು. ಸೇವಾ ಮನೋಭಾವದಿಂದ ಕೆಲಸ ಮಾಡಿದರೆ ಗೌರವ ಹೆಚ್ಚುತ್ತದೆ ಎಂದು ತಿಳಿಸಿದರು.

**ಶುಶ್ರೂಷಕಿಯರಿಗೆ ಪ್ರಮುಖ ಸ್ಥಾನ:** ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್ ಮಾತನಾಡಿ, ವೈದ್ಯಕೀಯ ಕ್ಷೇತ್ರದಲ್ಲಿ ಶುಶ್ರೂಷಕಿಯರ ಸೇವೆಗೆ ಪ್ರಮುಖ ಸ್ಥಾನಮಾನವಿದ್ದು, ಧಕ್ಕೆ ಬಾರದಂತೆ ನಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸಮಾರಂಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ, ಸಂಸ್ಥೆಯ ನಿರ್ದೇಶಕ ಜೆ. ರಾಜೇಂದ್ರ, ಸಂಸ್ಥೆಯ ರಿಜಿಸ್ಟ್ರಾರ್ ಡಾ.ಎ.ವಿ.ಎಂ. ಕುಟ್ಟಿ, ವೈದ್ಯಾಧಿಕಾರಿ ಡಾ.ಮೋಹನ್‌ಕುಮಾರ್, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ. ಎಂ.ಎಲ್.ಹರೇಂದ್ರ ಕುಮಾರ್, ನರ್ಸಿಂಗ್ ಕಾಲೇಜಿನ ಉಪಪ್ರಾಂಶುಪಾಲೆ ಪ್ರೊ.ಎಂ.ಎಸ್. ರಾಧ ಉಪಸ್ಥಿತರಿದ್ದರು.



ಕೋಲಾರದಲ್ಲಿ ದೇವರಾಜ ಅರಸು ನರ್ಸಿಂಗ್ ಕಾಲೇಜಿನಲ್ಲಿ ಮಂಗಳವಾರ ನಡೆದ ಘಟಿಕೋತ್ಸವವನ್ನು ನರ್ಸಿಂಗ್ ಸೇವೆಗಳ ನಿರ್ದೇಶಕಿ ಡಾ.ಕೆ.ಲಲಿತಾ. ಉದ್ಘಾಟಿಸಿದರು.

ಬಾಲಾಜಿ ವಿದ್ಯಾಪೀಠ ವಿ.ವಿ ನರ್ಸಿಂಗ್ ವಿಭಾಗದ ನಿರ್ದೇಶಕಿ ಲಲಿತಾ ಕಿವಿಮಾತು

# ಹಣಕ್ಕಿಂತ ಮಾನವೀಯತೆ ಮುಖ್ಯ

ಪ್ರಜಾವಾಣಿ ವಾರ್ತೆ

ಕೋಲಾರ: 'ವೈದ್ಯಕೀಯ ವೃತ್ತಿಯಲ್ಲಿ ಹಣ ಸಂಪಾದನೆಗಿಂತ ಮಾನವೀಯತೆ ಮುಖ್ಯ' ಎಂದು ಪುದುಚೆರಿಯ ಬಾಲಾಜಿ ವಿದ್ಯಾಪೀಠ ವಿಶ್ವವಿದ್ಯಾಲಯದ ನರ್ಸಿಂಗ್ ವಿಭಾಗದ ನಿರ್ದೇಶಕಿ ಡಾ.ಕೆ. ಲಲಿತಾ ಕಿವಿಮಾತು ಹೇಳಿದರು.

ಇಲ್ಲಿ ಮಂಗಳವಾರ ನಡೆದ ದೇವರಾಜ ಅರಸು ನರ್ಸಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ ಮಾತನಾಡಿ, 'ಹಣಕ್ಕಿಂತ ಜೀವ ದೊಡ್ಡದು. ವೈದ್ಯರು ಈ ಸಂಗತಿ ಅರಿತು ವೃತ್ತಿ ಜೀವನದಲ್ಲಿ ಪ್ರಾಮಾಣಿಕತೆ, ಬದ್ಧತೆ ತೋರಿದಾಗ ಮಾತ್ರ ಸಮಾಜದಲ್ಲಿ ಗೌರವ ಗಳಿಸಲು ಸಾಧ್ಯ' ಎಂದರು.

'ದೇಶದಲ್ಲಿ ವೈದ್ಯಕೀಯ ಕ್ಷೇತ್ರವು ಇತ್ತೀಚಿನ ದಿನಗಳಲ್ಲಿ ಹಣ ಮಾಡುವ ದಂಧೆಯಾಗಿದೆ. ವೈದ್ಯರಿಗೆ ಸೇವಾ ಮನೋಭಾವ ಇಲ್ಲವಾಗಿದೆ. ದೇಶದಲ್ಲಿ ವೈದ್ಯಕೀಯ ಪದವಿ ಪಡೆದು ಹಣ ಸಂಪಾದನೆಗಾಗಿ ವಿದೇಶಕ್ಕೆ ಹೋಗುತ್ತಿರುವುದು ವಿಷಾದಕರ. ಶುಶ್ರೂಷಕಿಯರು ರೋಗಿಗಳಿಗೆ ಗುಣಮಟ್ಟದ ವೈದ್ಯಕೀಯ ಸೇವೆ ಕಲ್ಪಿಸಿದಾಗ ಮಾತ್ರ ಓದು ಸಾರ್ಥಕ' ಎಂದು ಸಲಹೆ ನೀಡಿದರು.

'ರೋಗಿಗಳು ಆಸ್ಪತ್ರೆಗೆ ಬಂದ ತಕ್ಷಣ ಮೊದಲು ಶುಶ್ರೂಷಕಿಯರನ್ನು ಭೇಟಿಯಾಗುತ್ತಾರೆ. ರೋಗಿಗಳನ್ನು ಸ್ನೇಹದಿಂದ ಮಾತನಾಡಿಸುವುದರಿಂದ ಕಾಯಿಲೆ ಅರ್ಧದಷ್ಟು ವಾಸಿಯಾಗುತ್ತದೆ. ವೃತ್ತಿ ಜೀವನದಲ್ಲಿ ಸನ್ನಡತೆಯಿಂದ ಕಾರ್ಯ ನಿರ್ವಹಿಸಿದರೆ ವಿಶ್ವಾಸ ಗಳಿಸಬಹುದು' ಎಂದು ತಿಳಿಸಿದರು.



ಕೋಲಾರದಲ್ಲಿ ಮಂಗಳವಾರ ನಡೆದ ದೇವರಾಜ ಅರಸು ನರ್ಸಿಂಗ್ ಕಾಲೇಜಿನ ಘಟಿಕೋತ್ಸವದಲ್ಲಿ ಪುದುಚೆರಿಯ ಬಾಲಾಜಿ ವಿದ್ಯಾಪೀಠ ವಿ.ವಿ ನರ್ಸಿಂಗ್ ವಿಭಾಗದ ನಿರ್ದೇಶಕಿ ಡಾ.ಕೆ.ಲಲಿತಾ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರ ಪ್ರದಾನ ಮಾಡಿದರು.

**ಬದ್ಧತೆ ಇರಲಿ:** 'ರೋಗಿಗಳ ಸೇವೆಯಲ್ಲಿ ಸ್ವಚ್ಛತೆ, ಶಿಸ್ತು, ಬದ್ಧತೆ ಮತ್ತು ಪ್ರಾಮಾಣಿಕತೆ ಇರಬೇಕು. ಸೇವೆಯು ರೋಗಿಗಳಲ್ಲಿ ಭವಿಷ್ಯದ ಆಶಾಭಾವನೆ ಮೂಡಿಸಬೇಕು. ಈ ನಿಟ್ಟಿನಲ್ಲಿ ವೈದ್ಯರ ಚಿಕಿತ್ಸೆಗಿಂತ ಶುಶ್ರೂಷಕಿಯರ ಸೇವೆ ನಿರ್ಣಾಯಕ ಪಾತ್ರ ವಹಿಸುತ್ತದೆ. ರೋಗಿ ಹಾಗೂ ಶುಶ್ರೂಷಕಿಯರ ಸಂಬಂಧ ಪ್ರಮುಖವಾದದು' ಎಂದು ಅಭಿಪ್ರಾಯಪಟ್ಟರು.

'ಶುಶ್ರೂಷಕಿಯರು ಶಿಕ್ಷಣದ ಜತೆಗೆ ವೃತ್ತಿ ಕೌಶಲ ತರಬೇತಿ ಪಡೆದಾಗ ವೃತ್ತಿ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ. ಪದವಿ ಪಡೆದ ಮಾತ್ರಕ್ಕೆ ಶುಶ್ರೂಷಕಿಯರು ಎನಿಸಿಕೊಳ್ಳಲು ಆಗುವುದಿಲ್ಲ. ಪ್ರಾಮಾಣಿಕವಾಗಿ ಬಡವರಿಗೆ ಆರೋಗ್ಯ ಸೇವೆ ನೀಡಿದರೆ ಪದವಿಗೆ ಅರ್ಥ ಬರುತ್ತದೆ. ಸೇವಾ ಮನೋಭಾವದಿಂದ ಕೆಲಸ ಮಾಡಿದರೆ ಗೌರವ ಹೆಚ್ಚುತ್ತದೆ' ಎಂದು ಹೇಳಿದರು.

**ಅಧ್ಯಯನಶೀಲರಾಗಿ:** 'ವೈದ್ಯಕೀಯ ವೃತ್ತಿಯಲ್ಲಿ ಮಾನವೀಯ ಮೌಲ್ಯ ಮಾಯವಾಗಿದೆ. ವೈದ್ಯಕೀಯ ಕ್ಷೇತ್ರದಲ್ಲಿ ಶುಶ್ರೂಷಕಿಯರ ಸೇವೆಗೆ ಪ್ರಮುಖ ಸ್ಥಾನಮಾನವಿದ್ದು, ಧಕ್ಕೆ ಬಾರದಂತೆ ನಡೆದುಕೊಳ್ಳಬೇಕು. ವೃತ್ತಿ ಬದುಕಿನ ಉದ್ದಕ್ಕೂ ಅಧ್ಯಯನಶೀಲರಾಗಿರಬೇಕು. ವೃತ್ತಿ ಬದುಕಿನಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಮತ್ತಷ್ಟು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕು' ಎಂದು ದೇವರಾಜ ಅರಸು ವೈದ್ಯಕೀಯ ಮಹಾವಿದ್ಯಾಲಯದ ಕುಲಪತಿ ಡಾ.ಎಸ್.ಕುಮಾರ್ ತಿಳಿಸಿದರು.

ದೇವರಾಜ ಅರಸು ಉನ್ನತ ಶಿಕ್ಷಣ ಹಾಗೂ ಸಂಶೋಧನಾ ಸಂಸ್ಥೆ ಕಾರ್ಯದರ್ಶಿ ಜೆ.ಎಚ್. ನಾಗರಾಜ್, ನಿರ್ದೇಶಕ ರಾಜೇಂದ್ರ, ಕುಲಸಚಿವ ಡಾ.ಎ.ವಿ. ಎಂ.ಕುಟ್ಟಿ, ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲ ಡಾ.ಹರೇಂದ್ರಕುಮಾರ್, ವೈದ್ಯಾಧಿಕಾರಿ ಡಾ.ಮೋಹನ್ ಕುಮಾರ್, ನರ್ಸಿಂಗ್ ಕಾಲೇಜಿನ ಉಪ ಪ್ರಾಂಶುಪಾಲೆ ಪ್ರೊ.ಎಂ.ಎಸ್.ರಾಧಾ ಪಾಲ್ಗೊಂಡಿದ್ದರು.

**ಮುಖ್ಯಾಂಶಗಳು**

- ವೈದ್ಯಕೀಯ ಕ್ಷೇತ್ರ ಹಣ ಮಾಡುವ ದಂಧೆಯಾಗಿದೆ
- ವೈದ್ಯರಿಗೆ ಸೇವಾ ಮನೋಭಾವ ಇಲ್ಲವಾಗಿದೆ
- ವೃತ್ತಿಯಲ್ಲಿ ಮಾನವೀಯ ಮೌಲ್ಯ ಮಾಯ